


# ನಕ್ಕುಬಿಡಿ..!

## ಕೆಲಸವಿಲ್ಲದ ದುಡಿಮೆ!

ಮಗ: ಅಪ್ಪಾ, ಏನೂ ಕೆಲಸ ಮಾಡದೆ ದುಡಿಮೆ ಮಾಡೋ ಉದ್ಯೋಗ ಯಾವುದಾದ್ರೂ ಇದ್ರೆ ಹೇಳಪ್ಪ.

ಅಪ್ಪ: ನಂಗೊತ್ತಿಲ್ಲ ಮಗನೇ, ಕೆಲಸವನ್ನೇ ಮಾಡದೆ ಹಣ ಸಿಗೋಕೆ ಹೇಗೆ ಸಾಧ್ಯ?

ಮಗ: ಹಾಗಲ್ಲಪ್ಪ, ನನಗೆ ಕೆಲಸ ಇರಬಾರದು. ಬೇರೆಯವರೆಲ್ಲಾ ಅವರವರ ಕೆಲಸ ಮಾಡಿಕೊಂಡು ಹೋಗ್ತಾ ಇರಬೇಕು. ನಮಗೆ ಹಣ ಬರ್ತಾ ಇರಬೇಕು.

ಅಪ್ಪ: ಹಾಗಿದ್ದರೆ ಒಂದು 'ಸುಲಭ್ ಶೌಚಾಲಯ' ಶುರು ಮಾಡು!

★★★

## ಯಾರಿಗೆ ಫೋನ್?

ತಲೆನೋವೆಂದು ಆಫೀಸಿನಿಂದ ಬೇಗ ಬಂದ ಪತಿ ಹೆಂಡತಿಗೆ ಹೇಳಿದ, 'ನಾನೀಗ ನಿದ್ದೆ ಮಾಡ್ಬೇಕು, ನನ್ನ ಸ್ನೇಹಿತ ರಮೇಶ ಫೋನ್ ಮಾಡಿದ್ರೆ ನಾನಿಲ್ಲಾಂತ ಹೇಳ್ಬಿಡು.'

ಅವನು ಮಲಗಿದ ತಕ್ಷಣ ಫೋನ್ ಬಂತು. ಹೆಂಡತಿ ಫೋನ್ ಎತ್ತಿದವಳೇ, ನಮ್ಮೆಜಮಾನ್ರು ಮನೆಯಲ್ಲೇ ಇದ್ದಾರೆ– ಅಂತ ಹೇಳಿ ಇಟ್ಟುಬಿಟ್ಟಳು.

ಪತಿ ರೇಗಿದ, 'ರಮೇಶಂದೇನೇ ಫೋನು. ನಾನಿಲ್ಲ ಅಂತ ಹೇಳಿರಲಿಲ್ವಾ?

ಪತ್ನಿ ತಣ್ಣಗೆ ಹೇಳಿದಳು. 'ಅದ್ಯಾಕೆ ಹಂಗೆ ಕೂಗ್ತೀರಾ... ರಮೇಶಂದೇ ಫೋನು. ಆದರೆ ನಿಮಗೆ ಮಾಡಿದ್ದಲ್ಲ. ನನಗೆ!'

★★★



## ವ್ಯತ್ಯಾಸ

ಮೊದಲನೆ ಮಹಡಿಯಿಂದ ಬೀಳೋದಕ್ಕೂ ಏಳನೇ ಮಹಡಿಯಿಂದ ಬೀಳೋದಕ್ಕೂ ಏನು ವ್ಯತ್ಯಾಸ?

ಮೊದಲನೆ ಮಹಡಿಯಿಂದ ಬೀಳೋದು: ಧೊಪ್, ಅಯ್ಯೋ...!

ಏಳನೇ ಮಹಡಿಯಿಂದ ಬೀಳೋದು: ಅಯ್ಯೋ.... ಧೊಪ್!

★★★

## ತೇರಾ ಬಾಪ್!

ಒಬ್ಬ ತಮಿಳಿನವ ಮತ್ತು ಮತ್ತೊಬ್ಬ ಮಂಟಾ ಸಿಂಗ್ ರೈಲಿನಲ್ಲಿ ಪ್ರಯಾಣಿಸುತ್ತಿದ್ದರು. ತಮಿಳು ಆಸಾಮಿಗೆ ಸಿಂಗ್ ಜೊತೆಗೆ ಮಾತನಾಡುವ ಆಸೆ. ಆದರೆ ಅವನಿಗೆ ಹಿಂದಿ ಬರುತ್ತಿರಲಿಲ್ಲ. ಸಿಂಗ್‌ಗೆ ತಮಿಳು ಗೊತ್ತಿದೆಯೇ ಎಂದು ತಿಳಿಯಲು ಕೇಳಿದ, –'ತಮಿಳು ತೇರೀಮಾ,'

ಸರ್ದಾರ್‌ಜಿ ದುರುಗುಟ್ಟಿಕೊಂಡು ಗುಡುಗಿದ– 'ಹಿಂದಿ ತೇರಾ ಬಾಪ್!'

★★★

## ನಮ್ಮಪ್ಪ ಬಡವ!

ಹೋಟೆಲ್ ಮಾಣಿ ಒಂದೇ ರೂಪಾಯಿ ಟಿಪ್ಸ್ ಕೊಟ್ಟ ಗಿರಾಕಿಗೆ ಹೇಳಿದ– 'ಏನ್ಸಾರ್.. ನಿಮ್ಮ ಮಗನೇ ಪರವಾಗಿಲ್ಲ. ಹತ್ತು ರೂಪಾಯಿ ಟಿಪ್ಸ್ ಕೊಡ್ತಾರೆ..'

ಗಿರಾಕಿ ಉತ್ತರಿಸಿದ– 'ಅವರಪ್ಪ ಸಾಹುಕಾರ ಕಣಯ್ಯಾ... ಆದರೆ ನಮ್ಮಪ್ಪ ಬಡವ!'

★★★

## ಖುಷಿಯಾಗಿದ್ದೆ!

ಹೊಸದಾಗಿ ಸೈನ್ಯಕ್ಕೆ ಸೇರಿದ್ದವನ ಸೋಮಾರಿತನಕ್ಕೆ ಬೇಸತ್ತ ಅಧಿಕಾರಿ ಕೂಗಿದ, 'ಏ ಬೇಕೂಫಾ, ಸೈನ್ಯಕ್ಕೆ ಸೇರಕ್ಕೆ ಮೊದಲು ಏನಾಗಿದ್ದೆ?'

ಅವನು ಹೆದರುತ್ತಾ ಹೇಳಿದ– 'ಖುಷಿಯಾಗಿದ್ದೆ ಸಾರ್.'

ಹಾರಿಸಿದವರು: –ನಡಹಳ್ಳಿ ವಸಂತ್